Date : 17.06.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಕೆ.ವಿ.ಸಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ **3** ನೇ ಅರ್ಜಿದಾರನಿದ್ದು, **1** ಮತ್ತು **2** ನೇ ಅರ್ಜಿದಾರರು ನನ್ನ ತಾಯಿ ಮತ್ತು ಅಣ್ಣನಿದ್ದು, **4** ನೇ ಅರ್ಜಿದಾರನು ನನ್ನ ತಮ್ಮನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ದಿಃ **06.05.2024** ರ ದಿನಾಂಕದ ಒಂದು ಹಿಂಬರಹ ಮತ್ತು ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ **1** ಪಹಣಿ ಪ್ರತಿ ಮತ್ತು ದಿಃ **02.06.2023** ರ ದಿನಾಂಕದ ಅವಾರ್ಡ ನೋಟೀಸಿನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ**–1** ರಿಂದ **3** ಎಂದು, ದಿಃ 22.12.2021 ರಂದು 1 ನೇ ಎದುರುದಾರರು ಹೊರಡಿಸಿದ ಐತೀರ್ಪಿನ ನಕಲು ದೃಢೀಕೃತ ಪ್ರತಿ ಮತ್ತು ಅವಾರ್ಡ ತಃಖ್ತೆಯ ನಕಲು ದೃಡೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–4 ಮತ್ತು 5 ಎಂದು, ರಾ.ಹೆ.ಯ ಎಸ್.ಎಲ್.ಎ.ಒ ರವರು ದಿಃ 28.10.2017 ರಂದು ಹೊರಡಿಸಿದ ಒಂದು ಆದೇಶದ ನಕಲು ದೃಢೀಕೃತ ಪ್ರತಿ ಮತ್ತು ಅವಾರ್ಡ ತಃಖ್ತೆಯ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ಮತ್ತು 7 ಎಂದು, ಚಿತ್ರದುರ್ಗ ತಾಲ್ಲೂಕು ಡಿ.ಎಸ್ ಹಳ್ಳಿ ಗ್ರಾಮದ ಸರ್ವೆ ನಂ. 447/12, 447/7, 484/18, 484/19, 447/1, 447/4 ಮತ್ತು 447/16 ಆಸ್ತಿಯ ಬಗ್ಗೆ ಇರುವ ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಪಿ–8 ರಿಂದ 14 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – 1 ನೇ ಎದುರುದಾರ ಪರ ಶ್ರೀ ಡಿ.ಜಿ.ಪಿ. ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಜಮೀನು ಖುಷ್ಕಿ ಜಮೀನು ಇರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಸದರಿ ಜಮೀನು ಕೊಳವೆ ಬಾವಿ ಆಧಾರಿತ ನೀರಾವರಿ ಜಮೀನು ಇರುವುದೆಂದು ಹೇಳುತ್ತಾರೆ. ಆ ರೀತಿ ಭೂ ಸ್ವಾಧೀನ ಪಡಿಸಿಕೊಂಡ ಜಮೀನು ಕೊಳವೆ ಬಾವಿ ಆಧಾರಿತ ನೀರಾವರಿ ಜಮೀನು ಇರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಊರಾದ ಡಿ.ಎಸ್.ಹಳ್ಳಿ ಗ್ರಾಮವು ಚಿತ್ರದುರ್ಗ ಪಟ್ಟಣದಿಂದ 16 ಕಿಮೀ ದೂರದಲ್ಲಿ ಇರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಸದರಿ ಊರು ಅಂದಾಜು 7 ಕಿಮೀ ದೂರದಲ್ಲಿ ಇರುವುದೆಂದು ಹೇಳುತ್ತಾರೆ. ಅದೇ ರೀತಿ ಅರ್ಜಿಯಲ್ಲಿ ಕಾಣಿಸಿದ ಜಮೀನು ರಾ.ಹೆ.ಯಿಂದ ಸುಮಾರು 4 ಕಿಮೀ ದೂರದಲ್ಲಿ ಇರುವುದು ಎಂದು ಸೂಚಿಸಲಾಗಿ , ಇಲ್ಲಾ,

ನಮ್ಮ ಜಮೀನು ರಾಹೆ ಯಿಂದ ಅಂದಾಜು 500 ಮೀ ದೂರದಲ್ಲಿ ಇರುವುದೆಂದು ಸಾಕ್ಷಿ ಹೇಳುತ್ತಾರೆ. ಆ ಬಗ್ಗೆ ತೋರಿಸಲು ನಾನು ನ್ಯಾಯಾಲಯಕ್ಕೆ ನಕಾಶೆ ಅಥವಾ ಇತರೆ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿ.

2) 1 ನೇ ಎದುರುದಾರರು ನಮ್ಮ ಗ್ರಾಮದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ನಮಗೆ ಮತ್ತು ಇತರೆ ಜಮೀನುಗಳ ಮಾಲೀಕರಿಗೆ ನೋಟೀಸ್ ನೀಡಿ ಸಭೆ ಕರೆಯುತ್ತಿದ್ದು, ಅದಕ್ಕೆ ಹಾಜರಾಗಿರೆಂದು ನಮಗೆ ತಿಳಿಸಿದ್ದರು ಎಂದರೆ ಸರಿ. ಸದರಿ ಸಭೆಯಲ್ಲಿ ನಾನು ಭಾಗವಹಿಸಿದ್ದೆನು. ಸದರಿ ಸಭೆಯಲ್ಲಿ ಇಂತಿಂತಹ ಆಸ್ತಿಗಳಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳುತ್ತಿದ್ದು, ಅದಕ್ಕೇನಾದರೂ ತಮ್ಮದು ತಕರಾರು ಇದ್ದಲ್ಲಿ ಭೂ ಸ್ವಾಧೀನಾಧಿಕಾರಿಗೆ ತಕರಾರು ಸಲ್ಲಿಸಬಹುದು ಎಂದು ಸಭೆಯಲ್ಲಿದ್ದ ಜನರಿಗೆ ಅಧಿಕಾರಿಗಳು ಹೇಳಿದ್ದರು ಎಂದರೆ ಸರಿ. ಸದರಿ ಸಭೆಯಲ್ಲಿ ಕೂಡಿದ್ದ ಜನರು ಮತ್ತು ನಾನು ನಮ್ಮದು ತಕರಾರು ಇರುವುದೆಂದು ಅಧಿಕಾರಿಗಳಿಗೆ ಬರಹ ರೂಪದಲ್ಲಿ ದಾಖಲೆಯನ್ನೇನೂ ನಾವು ಕೊಟ್ಟಿರುವುದಿಲ್ಲ.

3) ಅರ್ಜಿಯಲ್ಲಿ ಕಾಣಿಸಿದ ನಮ್ಮ ಮಾಲೀಕತ್ವದ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುವಾಗ, 1 ನೇ ಎದುರುದಾರರ ಕಛೇರಿಯ ಸಿಬ್ಬಂದಿ ಹಾಗೂ ಸರ್ವೆ ಅಧಿಕಾರಿಗಳು ಬಂದು ನಮ್ಮ ಸಮಕ್ಷಮದಲ್ಲಿ ಆಸ್ತಿಯನ್ನು ಸರ್ವೆ ಮಾಡಿರುವರು ಎಂದರೆ ಸರಿ. ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನ ಪಡಿಸಿಕೊಂಡ ಬಾಬ್ತು ಪರಿಹಾರದ ಹಣವೆಂದು ಕೊಡುತ್ತಿದ್ದು, ಅದನ್ನು ಬಂದು ತೆಗೆದುಕೊಂಡು ಹೋಗಿರೆಂದು ನಮಗೆ 1 ನೇ ಎದುರುದಾರರು ನೋಟೀಸ್ ನೀಡಿದ್ದರು ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಭೂ ಸ್ವಾಧೀನ ಪಡಿಸಿಕೊಂಡ ಜಮೀನಿನ ಬಾಬ್ತು ಎದುರುದಾರರು ಪರಿಹಾರವೆಂದು ನಮಗೆ ರೂ. 10,18,595/- ಹಣ ಪಾವತಿಸಿರುವರು ಎಂದರೆ ಸರಿ. ಸದರಿ ಹಣವನ್ನು ನಾವು ಪಡೆಯುವ ಕಾಲಕ್ಕೆ ಯಾವುದೇ ತಕರಾರು ವ್ಯಕ್ತಪಡಿಸದೇ ಆ ಹಣವನ್ನು ಎದುರುದಾರರಿಂದ ತೆಗೆದುಕೊಂಡಿರುವೆವೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಆ ವೇಳೆಗೆ ನಾವು ಮೌಖಿಕವಾಗಿ ತಕರಾರು ಮಾಡಿ, ಆ ಹಣವನ್ನು ತಕರಾರಿಗೆ ಒಳಪಟ್ಟು ಪಡೆದಿರುವೆವು ಎಂದು ಹೇಳುತ್ತಾರೆ.

4) ಮುಖ್ಯವಿಚಾರಣೆಯ ಪುಟ-2 ರಲ್ಲಿ ಕಾಣಿಸಿದಂತೆ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ಬೆಲೆ 1 ಗುಂಟೆಗೆ ರೂ. 25,000/- ಇರುವುದೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿಯಲ್ಲ. ಮುಖ್ಯವಿಚಾರಣೆಯ ಪುಟ-2 ಮತ್ತು 3 ರಲ್ಲಿ ಕಾಣಿಸಿದ ಅಂಶಗಳಿಗೆ

ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಸೂಕ್ತ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಮೇಲೆ ಹೇಳಿದಂತೆ ಸೂಕ್ತ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಕೂಡ ಹಾಜರುಪಡಿಸಿರುವೆನೆಂದು ಸುಳ್ಳಾಗಿ ಹೇಳುತ್ತಿರುವೆನೆಂದರೆ ಸರಿಯಲ್ಲ. ನಿಪಿ–8 ರಿಂದ 14 ಎಂದು ಗುರುತಿಸಿದ ಪಹಣಿಯಲ್ಲಿ ಕಾಣುವ ಜಮೀನುಗಳು ಅರ್ಜಿಯಲ್ಲಿ ಕಾಣಿಸಿದ ಆಸ್ತಿಯಿಂದ ಬಹಳ ದೂರದಲ್ಲಿ ಇರುವುವು ಎಂದರೆ ಸರಿಯಲ್ಲ. ಸದರಿ ಜಮೀನು ಆ ಆಸ್ತಿಗಳಿಂದ ಎಷ್ಟು ದೂರದಲ್ಲಿ ಇರುವುವೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ.

5) ಎದುರುದಾರರು ಮೇಲೆ ಹೇಳಿದಂತೆ ನಮ್ಮ ಮಾಲೀಕತ್ವದ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡ ಬಾಬ್ತು ನನಗೆ ಕಾನೂನು ಬದ್ಧವಾಗಿ/ಕಾಯ್ದೆ ಯನ್ವಯ ಪರಿಹಾರವನ್ನು ಈಗಾಗಲೇ ಕೊಟ್ಟಿದ್ದು, ಅದು ಸೂಕ್ತ ಇರುವುದು ಎಂದರೆ ಸರಿಯಲ್ಲ. ನಮ್ಮ ಮಾಲೀಕತ್ವದ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ಎದುರುದಾರರು ಈಗಾಗಲೇ ನಮಗೆ ಸೂಕ್ತ ಪರಿಹಾರವನ್ನು ನೀಡಿದ್ದು, ಆದರೂ ಕೂಡ ನಾನು ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅಂಶದ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿರುವೆನೆಂದರೆ ಸರಿಯಲ್ಲ.

**– ಪಾಟೀ ಸವಾಲು – 2 ನೇ ಎದುರುದಾರ ಪರ ಶ್ರೀ ವಿ.ಡಿ.ಆರ್. ವಕೀಲರ ಪರ ಶ್ರೀ ಕೆ.ಪಿ.ಎಂ. ವಕೀಲರಿಂದ –**

ವಕೀಲರು ಹಾಜರಿದ್ದು, ಈ ಮೇಲೆ 1 ನೇ ಎದುರುದಾರರು ಮಾಡಿರುವ ಪಾಟೀ ಸವಾಲನ್ನು 2 ನೇ ಎದುರುದಾರರ ಪರ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿತ್ರದುರ್ಗ.*